ನಿಘರುಣ ನಿಯಮದ ಅನುಲ್ಲಂಘ್ಯ ಚಕ್ರದಲಿ
ತಾನುರುಳಿ ನಮ್ಮನುರುಳಿಸುವ ಶಾಸನ ನಿಷ್ಠೆ
**(ಈ ಪದ್ಯ 'ಮನುಕುಲದ ಹಾಡು'- 1961- ಸಂಗ್ರಹದಲ್ಲಿದೆ.)**

ವಿಶೇಷವೆಂದರೆ ಅಡಿಗರ 'ಹದ್ದು' ಪದ್ಯ ಹಾಗೂ ಕಂಬಾರರ ನಾಟಕ 'ಮಹಾಮಾಯಿ' - ಇಲ್ಲಿರುವ ಪ್ರತಿಮೆಗಳನ್ನು ಬಳಸಿಕೊಳ್ಳುತ್ತವೆ. ಇವೆರಡೂ ಕೃತಿಗಳು ಮಾನವನ ಸ್ವಾಯತ್ತತೆಯ ಬಗ್ಗೆ ತೀವ್ರವಾದ ಪ್ರಶ್ನೆಗಳನ್ನು ಇದೇ ಧಾಟಿಯಲ್ಲಿ ಕೇಳುತ್ತವೆ. ಇದೇ ಸಂಕಲನದಲ್ಲಿರುವ 'ದುಃಖಗೀತೆ' ಈ ಚಿಂತನೆಯನ್ನು ಮುಂದುವರೆಸುತ್ತದೆ. ಈ ಪದ್ಯವು ಚಿತ್ತಾಲರು ತಮ್ಮ ತಂದೆಯ ಆತ್ಮಹತ್ಯೆಯ ಬಗ್ಗೆ ಬರೆದ ಕನ್ನಡದ ಶ್ರೇಷ್ಠ ಕವನಗಳಲ್ಲಿ ಒಂದಾಗಿದೆ. ಅವರ ತಂದೆಗೆ ತಂದೆಯ ಜೀವನದಲ್ಲಿ ಒಂದಿಷ್ಟು ನೆಮ್ಮದಿ ಬಂದಿತು ಎನ್ನುವಾಗಲೇ ವಿಚಿತ್ರವೂ ಕ್ರೂರವೂ ಆದ ಒಂದು ರೋಗ ಅವರನ್ನು ಬಾಧಿಸತೊಡಗುತ್ತದೆ. ಮೈಯ ನೆತ್ತರು ಕೊಳೆಯಿಸುವ ರೋಗವದು. ಅದನ್ನು-

ಪೊದೆಯೊಳಡಗಿದ ಕರಿಯ ಭಿಲ್ಲ ದುರ್ವಿಧಿ,
ಕೊಲದೆ
ಕಳ್ಳತನದಲಿ ಮೈಯನಷ್ಟೆ ಭೇದಿಸಿ ಭಾಲೆಯಸೆದಿದ್ದ
ನಿಷ್ಕಾರಣ ಕ್ರೌರ್ಯದಿಂದ

ಎಂದು ವರ್ಣಿಸುತ್ತಾರೆ. ನೆಲದ ಪಾತಳಿಯೇ ಮುಗ್ಗರಿಸಿದಂತೆ ಕಲ್ಪನೆಗೂ ಸಿಕ್ಕದಂಥ ಯಾತನೆ ಶುರುವಾಗುತ್ತದೆ. ಇದು ದಿಗ್ಭ್ರಮೆ ಹುಟ್ಟಿಸುತ್ತದೆ.

ಏಕೆ ಎಲ್ಲಿಂದ ಎರಗಿತೀ ಹ್ರಾಸಗೈವಾಘಾತವೆಂದು
ಎಲ್ಲೆಡೆಗರಿಸಿ ತ್ರಾಸುಗೊಂಡೆ
ಆಹ! ನಿರುತ್ತರವಾಗಿ ಹರಿದಿತ್ತು ವಿಧಿಯ ತೆರೆ

ಈ ವ್ಯಾಧಿಯು ಹೇಗಿತ್ತೆಂದರೆ 'ಜೀವಕ್ಕೆ ಬಿಗಿದ ಘಟಸರ್ಪವಾಯಿತು ದೇಹ'.

ಈ ಪ್ರತಿಮೆಯನ್ನು ಲಾವೋಕೂನ್‌ನ ಬಗೆಗಿನ ಗ್ರೀಕ್ ಪುರಾಣಕತೆಯ ಮೂಲಕವೂ ಚಿತ್ತಾಲರು ವಿವರಿಸುತ್ತಾರೆ. ಇಂಥ ಅಮಾನುಷವಾದ ಪೀಡೆಯಿಂದಾಗಿ ಸಹಜವಾಗಿಯೇ ಇಷ್ಟೆಲ್ಲವನ್ನು ಮಾಡಿ ನಿರ್ಲಿಪ್ತವಾಗಿರುವ ಸೃಷ್ಟಿಯ ಬಗ್ಗೆ ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ.

ದೇವರೇ ಎಂದೆ, ದುರ್ದೈವವೇ ಎಂದೆ
ಪೂರ್ವಸಂಚಿತವೆಂದೆ, ಇಹವು ವಂಚಿಸಿತೆಂದೆ
................
................
ನಾ ಹುಟ್ಟಿ ಬರುವಾಗಲೇ ಪಿಂಡದಲಿ ಬಂತು
ಏನೋ ದುರ್ದೈವದೆಳೆ
**(ಶುಭ್ರ ಲೋಲಕದಲ್ಲಿ ಬಿರುಕಿನ ಸೂಕ್ಷ್ಮಗೆರೆ)**

ಈ ಎಲ್ಲ ಹೇಳಿಕೆಗಳು ಅನೂಹ್ಯವಾದ ಅಸಹನೀಯವಾದ ನೋವಿನಿಂದ ವಿಹ್ವಲನಾದ ತಂದೆಯ ಹೇಳಿಕೆಗಳು. ಮುಂದಿನ ಭಾಗಗಳಲ್ಲಿ ಸ್ಪಷ್ಟವಾಗಿಯೇ ಮಗನಾದ ಕವಿಯ ದನಿ ಕೇಳುತ್ತದೆ. ಆ ದನಿಯ ಪ್ರಕಾರ ಈ ಕೂಟ ಪ್ರಶ್ನೆಗಳಿಗೆ ಉತ್ತರವೇ ಇಲ್ಲ. ಏಕೆಂದರೆ ಅದು,

ಬುದ್ಧಿವೇದ್ಯವಲ್ಲ, ವಾದಭೇದ್ಯವಲ್ಲ, ನಿವೇದ್ಯವೂ
ಅಲ್ಲ

ಇವುಗಳನ್ನು ಮೀರಿ ಮನುಷ್ಯ ಪ್ರಜ್ಞೆಯ ಈ ಪ್ರಶ್ನೆಗಳಿಗೆ ಉತ್ತರ ಹುಡುಕಲು ಹೊರಟಾಗ ಅರ್ಥವಾಗುವುದೆಂದರೆ ನಮ್ಮ ಅಸ್ತಿತ್ವದ ಅನೇಕ ಅಂಶಗಳು- ನಮ್ಮ ಹುಟ್ಟು ಕೂಡ- ನಮ್ಮ ಆಯ್ಕೆಯಲ್ಲ ಎನ್ನುವುದು. ಪ್ರಸಿದ್ಧ ಅಸ್ತಿತ್ವವಾದಿ ಚಿಂತಕ ಸಾರ್ತ್ರ ಹೇಳುವಂತೆ 'We are thrown into this world.' ನಾವು ಪಡೆದದ್ದೂ ಕೂಡ ನಮ್ಮದಲ್ಲ.

ಮನುಷ್ಯ ಅಸ್ತಿತ್ವದ ವ್ಯಂಗ್ಯವೆಂದರೆ,

ಈ ಪರಾಧೀನತೆಯ ಮೇಲೆ ಕಟ್ಟಿದೆ ನಮ್ಮ
ಕರ್ತೃತ್ವದ ಧ್ಯಾನ

ಹೀಗಾಗಿ ಈ ಪಾರತಂತ್ರ್ಯದಲ್ಲಿಯೇ 'ನಾವು ನಾವೆಂಬ ಸ್ವತಂತ್ರ ಸ್ವಂತದ ಪ್ರಜ್ಞೆ' ಕೆಲಸ ಮಾಡಬೇಕಾಗಿದೆ.